# ಅಂಚೆ ವ್ಯವಸ್ಥೆಯ ಸುಧಾರಕ ಗುರುನಾಥ ಬೇವೂರ್

**ಭಾರತೀಯ ಅಂಚೆ ವ್ಯವಸ್ಥೆಯಲ್ಲಿ ನವನವೀನ ಸೇವೆಗಳನ್ನು ಪರಿಚಯಿಸಿದ ಕನ್ನಡಿಗ ಗುರುನಾಥ ಬೇವೂರರು, ಕಾರ್ಯಕ್ಷಮತೆಗೆ ಹೆಸರಾದವರು. ಅಂಚೆಯಲ್ಲಿ ಮಹತ್ತರ ಬದಲಾವಣೆಗಳಿಗೆ ಕಾರಣರಾದವರು.**




■ ಜಗನ್ನಾಥ ಪ್ರಕಾಶ್ ಎನ್.

ಆಧುನಿಕ ಅಂಚೆ ಪದ್ಧತಿಯನ್ನು ಜಗತ್ತಿಗೆ ಪರಿಚಯಿಸಿದ ಬ್ರಿಟಿಷರು ತಾವು ಆಳ್ವಿಕೆ ನಡೆಸುತ್ತಿದ್ದ ಭಾರತದಲ್ಲಿ ಅಂಚೆ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ಕೈಗೊಳ್ಳುವಂತೆ ಜವಾಬ್ದಾರಿ ವಹಿಸಿದ್ದು ಭಾರತೀಯರೊಬ್ಬರಿಗೆ, ಅದರಲ್ಲೂ ಕನ್ನಡಿಗರೊಬ್ಬರಿಗೆ. ಅವರೇ ಗುರುನಾಥ ಬೇವೂರ್.

ಬಾಗಲಕೋಟೆಯ ಬೇವೂರ ಗ್ರಾಮದವರಾದ ಇವರು ಮೆಟ್ರಿಕ್‌ವರೆಗೆ ವ್ಯಾಸಂಗ ಮಾಡಿದ್ದು ಬೇವೂರ್, ಬಾಗಲಕೋಟೆ ಹಾಗೂ ವಿಜಾಪುರಗಳಲ್ಲಿ. ಮುಂದೆ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಪ್ರಥಮ ದರ್ಜೆಯೊಂದಿಗೆ ಉತ್ತೀರ್ಣರಾದಾಗ ಅವರಿಗೆ ದೊರೆತಿದ್ದು ದಕ್ಷಿಣಾ ಫೆಲೊಷಿಪ್.

ಮುಂಬೈನ ಹೆಸರಾಂತ ಬ್ಯಾರಿಸ್ಟರ್ ಆರ್.ಎಸ್. ಮುಧೋಳಕರ್ ಅವರ ಪುತ್ರಿಯನ್ನು ಲಗ್ನವಾದ ಗುರುನಾಥರು ಉಚ್ಚ ಶಿಕ್ಷಣಕ್ಕೆ ಹೊರಟಿದ್ದು ಇಂಗ್ಲೆಂಡ್‌ನ ಕೇಂಬ್ರಿಜ್ ವಿಶ್ವವಿದ್ಯಾನಿಲಯಕ್ಕೆ. ಅಲ್ಲಿ ಬಿ.ಎಸ್ಸಿ. ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. 1911ರಲ್ಲಿ ಐಸಿಎಸ್ ಪರೀಕ್ಷೆಯಲ್ಲಿ ಯಶ ಸಾಧಿಸಿದಾಗ ಅವರಿಗೆ ಕೇವಲ 22 ವರ್ಷ.

ಭಾರತೀಯ ಆಡಳಿತ ಸೇವೆಗೆ ಸೇರಿದ ಇವರು ಮಧ್ಯಪ್ರದೇಶದ ಕೆಲವು ಜಿಲ್ಲೆಗಳಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಆಗ ರಾಷ್ಟ್ರೀಯ ಆಂದೋಲನದ ಸಮಯ. ಗಾಂಧೀಜಿ ಉಪ್ಪಿನ ಸತ್ಯಾಗ್ರಹ ಸೇರಿದಂತೆ ಹಲವಾರು ಚಳವಳಿಗಳನ್ನು ಸಂಘಟಿಸುತ್ತಿದ್ದ ಕಾಲಘಟ್ಟ. ಗುರುನಾಥರು ಸರ್ಕಾರಿ ಅಧಿಕಾರಿಯಾಗಿದ್ದರೂ ರಾಷ್ಟ್ರ ಬಿಡುಗಡೆ ಹೋರಾಟದತ್ತ ಒಲವು ಇದ್ದವರು. ಇದನ್ನು ತಿಳಿಯಲು ಮೇಲಧಿಕಾರಿಗಳಿಗೆ ಹೆಚ್ಚಿನ ಸಮಯವೇನೂ ಬೇಕಾಗಲಿಲ್ಲ. ಮಾರುವೇಷದಲ್ಲಿ ಸ್ವಾತಂತ್ರ್ಯ ಹೋರಾಟದ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸುವುದು ಗುಟ್ಟಾಗೇನೂ ಇರಲಿಲ್ಲ.

ವೃತ್ತಿ ಆಡಳಿತದ ಆಯಕಟ್ಟಿನ ಸ್ಥಳಗಳಲ್ಲಿ ಇರುವುದು ಬೇಡವೆಂದು ನಿರ್ಧರಿಸಿದ ಹಿರಿಯ ಅಧಿಕಾರಿಗಳು ಗುರುನಾಥರನ್ನು ಆಡಳಿತ ವಿಭಾಗದಿಂದ ಅಂಚೆ ಇಲಾಖೆಯಲ್ಲಿ ಸುಧಾರಣೆ ಕೈಗೊಳ್ಳುವ ಕೆಲಸಕ್ಕೆ ಹಚ್ಚಿದ್ದೆಂದು ಗುಸುಗುಸು ಇತ್ತು. ನಂತರದಲ್ಲಿ, ಗುರುನಾಥ ಬೇವೂರ್ ಮುಂಬೈ ಹಾಗೂ ಮಧ್ಯಪ್ರದೇಶಗಳಲ್ಲಿ ಪೋಸ್ಟ್‌ಮಾಸ್ಟರ್ ಹುದ್ದೆಗೇರಿದರು. 1934ರಲ್ಲಿ ಅಂಚೆ ಇಲಾಖೆಯ ಡೈರೆಕ್ಟರ್ ಜನರಲ್ ಆಗಿ ನೇಮಕವಾದ ಅವರು ಅಂಚೆ ಇಲಾಖೆಯ ಕಾರ್ಯಮಾಪನ ಪದ್ಧತಿ ಪರಿಷ್ಕರಣೆಗಾಗಿ ವಿಶೇಷ ಅಧಿಕಾರ ಪಡೆದ ಅಧಿಕಾರಿಯಾಗಿ ಆಯ್ಕೆಯಾದರು. ಈ ಹುದ್ದೆ ಪಡೆದ ಮೊದಲ ಭಾರತೀಯ ಅಧಿಕಾರಿ ಅವರು.

ಅಂಚೆ ಇಲಾಖೆಯ ಒಳಹೊರಗುಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದ ಅವರು, ನವೀನ ಕಾರ್ಯಮಾಪನ ಸೂತ್ರವನ್ನು ಮಂಡಿಸಿದರು. ಅದೇ ಪ್ರಸಿದ್ಧ 'ಬೇವೂರ್ ಟೈಂಸ್ ಟೆಸ್ಟ್'. ದಶಕಗಳೇ ಕಳೆದರೂ, ಸರ್ಕಾರಗಳೇ ಬದಲಾದರೂ ಇಂದಿಗೂ ಅಂಚೆ ಇಲಾಖೆ ದಸ್ತಾವೇಜುಗಳಲ್ಲಿ ಇದೇ ಸೂತ್ರಗಳೇ 'ಬೇವೂರ್ ಸ್ಟ್ಯಾಟಿಸ್ಟಿಕ್ಸ್' ಎಂದು ಉಪಯೋಗವಾಗುತ್ತಿವೆ.

ಭಾರತೀಯ ಅಂಚೆ ಚರಿತ್ರೆಯನ್ನು ಬರೆದ ಪ್ರಸಿದ್ಧ ಲೇಖಕ ಮುಲ್ಕರಾಜ ಆನಂದ್ ಅವರು, ಬೇವೂರ್ ಅವರು ರೂಢಿಗೆ ತಂದ ಕಾಲಮಾಪನ ಸೂತ್ರ ಎಷ್ಟು ಸತ್ವಯುತವೆನ್ನುವುದನ್ನು ವಿವರವಾಗಿ ಗುರ್ತಿಸಿ ಬೇವೂರ್ ಅವರ ಕಾರ್ಯಕ್ಷಮತೆಯನ್ನು ಶ್ಲಾಘಿಸಿದ್ದುಂಟು.

ಇಂಡಿಯನ್ ಪೋಸ್ಟಲ್ ಆರ್ಡರ್, ಸಂಚಾರಿ ಅಂಚೆ ಕಚೇರಿಗಳಂತಹ ನವನವೀನ ಸೇವೆಗಳನ್ನು ಭಾರತೀಯ ಅಂಚೆ ಇಲಾಖೆಯಲ್ಲಿ ಜಾರಿಗೆ ತರಲು ಕಾರಣರಾದ ಗುರುನಾಥರು, ಬ್ರಿಟಿಷ್ ಸರ್ಕಾರದಲ್ಲಿ ಮೊದಲ ಭಾರತೀಯ ಸಂಪರ್ಕ ಖಾತೆಯ ಕಾರ್ಯದರ್ಶಿಯಾಗಿ ನೇಮಕವಾದರು. ಇದು ಐಸಿಎಸ್ ಅಧಿಕಾರಿಯೊಬ್ಬರಿಗೆ ದೊರಕಿದ ಮೊದಲ ಗೌರವವೂ ಹೌದು.

ನೈಟ್‌ಹುಡ್ ಸೇರಿದಂತೆ ಹಲವು ಗೌರವಗಳಿಗೆ ಪಾತ್ರರಾದ ಬೇವೂರರು, ರಾಮೇಶ್ವರದ ದೇಗುಲ, ತಾಜ್‌ಮಹಲ್, ಅಮೃತಸರದ ಸ್ವರ್ಣಮಂದಿರ, ಮುಂಬೈನ ಗೇಟ್ ವೇ ಆಫ್ ಇಂಡಿಯಾ ಮೊದಲಾದ ಭಾರತೀಯ ಚಿತ್ರಗಳಿದ್ದ ಬಹುವರ್ಣ ಅಂಚೆಚೀಟಿಗಳು ಬಿಡುಗಡೆಯಾಗಲು ಕಾರಣರಾದರು. ಭಾರತ ಸರ್ಕಾರದ ಅತ್ಯುನ್ನತ ಅಧಿಕಾರಿಯಾದರೂ ತಮ್ಮ ಹುಟ್ಟೂರಿನ ಜನಸಾಮಾನ್ಯರೊಂದಿಗೆ ನಿಕಟ ಸಂಬಂಧ ಹೊಂದಿದ್ದ ಅವರು, ಹಳ್ಳಿಯಲ್ಲಿ ನೀರು ಸಂಗ್ರಹಣೆಯ ಟ್ಯಾಂಕ್ ಇನ್ನಿತರ ಮೂಲಸೌಲಭ್ಯಗಳಿಗೆ ನೆರವಾದರು.

ಬಾಗಲಕೋಟೆಯ ಉದ್ಯಾನದಲ್ಲಿ ಸಾರ್ವಜನಿಕ ರೇಡಿಯೊ ಸ್ಥಾಪನೆ ಮಾಡಿಸಿದ ಅವರು, ಬಹುಕಾಲ ನೆನಪಿನಲ್ಲುಳಿಯುವಂಥ ಕಾರ್ಯಗಳನ್ನು ಮಾಡಿ ಹೋಗಿದ್ದಾರೆ. ಭಾರತೀಯ ಅಂಚೆ ಇಲಾಖೆ ಇವರ ಗೌರವಾರ್ಥ ಅಂಚೆಚೀಟಿ ಬಿಡುಗಡೆಗೊಳಿಸಿದ್ದರೆ, ಮೈಸೂರಿನಲ್ಲಿ ಅಂಚೆ ಕಚೇರಿ ಆವರಣದಲ್ಲಿ ಸಭಾಂಗಣವೊಂದನ್ನು ನಿರ್ಮಿಸಲಾಗಿದೆ.

ಪ್ರತಿಕ್ರಿಯಿಸಿ: feedback@sudha.co.in